ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

(374)

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

**ವಿಷಯ:** ದಕ್ಷಿಣ ಕನ್ನಡ ಜಿಲ್ಲೆ, ಬಂಟ್ವಾಳ ತಾಲ್ಲೂಕು, ಸಂಗಬೆಟ್ಟು ಗ್ರಾಮದಲ್ಲಿ 110/11ಕೆ.ವಿ ಉಪಕೇಂದ್ರ ಸ್ಥಾಪಿಸುವ ಸಲುವಾಗಿ ಸರ್ವೆ ಸಂಖ್ಯೆ 274/2 ರಲ್ಲಿನ 2.957 ಎಕರೆ ಖಾಸಗಿ ಜಮೀನನ್ನು ನೇರ ಖರೀದಿ ಮಾಡುವ ಹಾಗೂ ಸರ್ವೆ ಸಂಖ್ಯೆ 724/3 ರಲ್ಲಿನ 0.68 ಎಕರೆ ಸರ್ಕಾರಿ ಜಮೀನನ್ನು ನಿಗಮಕ್ಕೆ ಹಂಚಿಕೆ ಮಾಡಿಸಿಕೊಳ್ಳುವ ಬಗ್ಗೆ.

**ಉಲ್ಲೇಖ:**
1. ಕವಿಪ್ರನಿನಿ/ಎಸ್‌ಎ8/ಬಿ7/2003/14-15 ದಿನಾಂಕ 15/09/2016.
2. ಜಂಟಿ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆ, ಮೈಸೂರು ರವರ ಪತ್ರ ಸಂಖ್ಯೆ ಜಂ.ನಿ.ಮೈ/ನ.ಯೋ(1)/ವಿ.ನ.ಅ/58/2016-17 ದಿನಾಂಕ 20/02/2017.
3. ಕವಿಪ್ರನಿನಿ/ಎಸ್‌ಎ8/ಬಿ7/2003/14-15 ದಿನಾಂಕ 13/07/2017.
4. ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ರವರ ಪತ್ರ ಸಂಖ್ಯೆ ಎಲ್‌ಎನ್‌ಡಿ(1), ಡಿಪಿಆರ್:166/2019/ಇ-70902/ಬಿ8 ದಿನಾಂಕ 22/10/2019.
5. ಮುಖ್ಯ ಇಂಜಿನಿಯರ್(ವಿ)/ಪ್ರವ/ಹಾಸನ ರವರ ಪತ್ರ ಸಂಖ್ಯೆ ಅ.ಇಂ (ಕ)/ಕಾ.ನಿ.ಇಂ (ಸಿ)/2019-20/14899-902 ದಿನಾಂಕ 13/01/2020.
6. ಮುಖ್ಯ ಇಂಜಿನಿಯರ್(ವಿ) (ಯೋ ಮತ್ತು ಸ), ಬೆಂಗಳೂರು ರವರ ಟಿಪ್ಪಣಿ ಸಂಖ್ಯೆ SEE(T)/EET2/AEE-5/KCO-107/8296/19-20 ದಿನಾಂಕ 19/01/2020.
7. ಮುಖ್ಯ ಇಂಜಿನಿಯರ್(ವಿ) (ಯೋ ಮತ್ತು ಸ), ಬೆಂಗಳೂರು ರವರ ಪತ್ರ ಸಂಖ್ಯೆ ಅ.ಇಂ-ತಾಂ/ಕಾನಿಇಂ-ತಾಂ/AEE-5/KCO-107/8296/19-20/11371-76 ದಿನಾಂಕ 27/11/2020.
8. ಕವಿಪ್ರನಿನಿ/ವ್ಯನಿ/ಹಿಆಕಾ/ಎಸ್‌ಎ8/ಬಿ7/2003/14-15/151 ದಿನಾಂಕ 12/11/2021.

* * * * *

**ಪೀಠಿಕೆ:**

1. ದಕ್ಷಿಣ ಕನ್ನಡ ಜಿಲ್ಲೆ, ಬಂಟ್ವಾಳ ತಾಲ್ಲೂಕು, ಸಂಗಬೆಟ್ಟು ಗ್ರಾಮದಲ್ಲಿ 110/11ಕೆ.ವಿ ಉಪಕೇಂದ್ರ ಸ್ಥಾಪಿಸಲು ಶ್ರೀ. ಪಾಲ್ ಪಿಂಟೋ ರವರಿಗೆ ಸೇರಿದ ಸರ್ವೆ ಸಂಖ್ಯೆ 274/2 ರಲ್ಲಿನ 3.02 ಎಕರೆ ವಸತಿ ಉದ್ದೇಶಕ್ಕಾಗಿ ಪರಿವರ್ತಿತ ಜಮೀನನ್ನು ಪ್ರತಿ ಸೆಂಟ್ಸ್ ಗೆ ರೂ.55,000/- ಗಳಂತೆ ಒಟ್ಟು ಮೊತ್ತ ರೂ.1,66,10,000/- (ನೋಂದಣೆ ಮತ್ತು ಮುದ್ರಾಂಕ ಶುಲ್ಕ ಹೊರತುಪಡಿಸಿ) ಗಳಂತೆ ಖರೀದಿಸಲು ಉಲ್ಲೇಖ (1) ರ ಪತ್ರದಲ್ಲಿ ಅನುಮೋದನೆ ನೀಡಲಾಗಿತ್ತು.

2. ಸದರಿ ಜಮೀನಿನಲ್ಲಿ ಉಪಕೇಂದ್ರ ನಿರ್ಮಿಸುವ ಸಂಬಂಧ ಜಂಟಿ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ವಿಭಾಗೀಯ ಕಚೇರಿ, ಮೈಸೂರು ರವರು ವಾಣಿಜ್ಯ ಉದ್ದೇಶದ ವಿನ್ಯಾಸ ನಕ್ಷೆಗೆ ಉಲ್ಲೇಖ (2) ರ ಪತ್ರದಲ್ಲಿ 2.307 ಎಕರೆ ಜಾಗವನ್ನು ವಾಣಿಜ್ಯ ಉಪಯೋಗಕ್ಕಾಗಿ ಗುರುತಿಸಿ ಉಪಕೇಂದ್ರ ಸ್ಥಾಪಿಸಲು ತಾಂತ್ರಿಕ ಅನುಮೋದನೆ ನೀಡಿರುತ್ತಾರೆ.

3. ಸದರಿ ಜಮೀನಿನ ಆರ್‌ಟಿಸಿ ಯಲ್ಲಿ 3.02 ಎಕರೆಯೆಂದು ನಮೂದಿಸಿದ್ದರು 2.957 ಎಕರೆ ಜಮೀನು ಮಾತ್ರ ಲಭ್ಯವಿದ್ದು, ಸದರಿ ಜಾಗದಲ್ಲಿ ವಾಣಿಜ್ಯ ಉಪಯೋಗಕ್ಕಾಗಿ ಸೂಚಿಸಿರುವ 2.307 ಎಕರೆ ಜಾಗದಲ್ಲಿ ಭೂ ಛಾಪೆಯ ವಿನ್ಯಾಸ ಮಾಡಲು ಸಾಧ್ಯವಿಲ್ಲವೆಂದು ಅಧೀಕ್ಷಕ ಇಂಜಿನಿಯರ್ (ವಿ), (ಆರ್ & ಡಿ) ರವರು ತಿಳಿಸಿದ್ದ ಹಿನ್ನೆಲೆಯಲ್ಲಿ, ಸದರಿ ಜಮೀನಿಗೆ ಹೊಂದಿಕೊಂಡಂತಿರುವ ಸರ್ಕಾರಿ ಜಾಗವನ್ನು ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ರವರಿಂದ ಹಂಚಿಕೆ ಮಾಡಿಸಿಕೊಳ್ಳಲು ಕ್ರಮಕೈಗೊಳ್ಳುವಂತೆ ಉಲ್ಲೇಖ (3) ರ ಪತ್ರದಲ್ಲಿ ಅನುಮೋದನೆ ನೀಡಲಾಗಿತ್ತು.

4. ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ರವರು ಉಲ್ಲೇಖ (4) ರ ಸೂಚನಾ ಪತ್ರದಲ್ಲಿ ಸಂಗಬೆಟ್ಟು ಗ್ರಾಮದ ಸರ್ವೆ ಸಂಖ್ಯೆ 274/3 ರಲ್ಲಿ 0.68 ಎಕರೆ ಸರ್ಕಾರಿ ಜಮೀನನ್ನು ಮಂಜೂರು ಮಾಡಲು ಒಟ್ಟು ಮೊತ್ತ ರೂ.2,27,787/- ಗಳನ್ನು ಪಾವತಿಸಲು ಸೂಚಿಸಿರುತ್ತಾರೆ.

5. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಹಾಸನ ರವರ ಉಲ್ಲೇಖ (5) ರ ಪತ್ರದಲ್ಲಿ ಈಗಾಗಲೆ ಗುರುತಿಸಿರುವ ಸರ್ವೆ ಸಂಖ್ಯೆ 274/2 ರಲ್ಲಿನ ಖಾಸಗಿ ಜಮೀನು ಹಾಗೂ ಸರ್ವೆ ಸಂಖ್ಯೆ 274/3 ರಲ್ಲಿನ ಸರ್ಕಾರಿ ಜಮೀನು ಉಪಕೇಂದ್ರ ಸ್ಥಾಪಿಸಲು ಸೂಕ್ತವಾಗಿಲ್ಲವೆಂದು ಅಭಿಪ್ರಾಯ ನೀಡಿದ ಹಿನ್ನೆಲೆಯಲ್ಲಿ, ಸದರಿ ಜಾಗವನ್ನು ಅಧೀಕ್ಷಕ ಇಂಜಿನಿಯರ್ (ತಾಂತ್ರಿಕ) ಹಾಗೂ ಅಧೀಕ್ಷಕ ಇಂಜಿನಿಯರ್ (ಸಿವಿಲ್) ರವರು ಜಂಟಿಯಾಗಿ ಸ್ಥಳ ಪರಿವೀಕ್ಷಣೆ ನಡೆಸಿದ್ದು, ಗುರುತಿಸಿರುವ ಜಾಗ ಈ ಕೆಳಕಂಡ ಕಾರಣಗಳಿಂದ ಸೂಕ್ತವಲ್ಲವೆಂದು ಉಲ್ಲೇಖ (6) ರ ಟಿಪ್ಪಣಿಯಲ್ಲಿ ಅಭಿಪ್ರಾಯ ನೀಡಿರುತ್ತಾರೆ.

   i. ಗುರುತಿಸಲಾದ ಜಮೀನು ಸಮತಟ್ಟಾಗಿರದೆ ರಸ್ತೆಯ ನೆಲಮಟ್ಟದಿಂದ ಸುಮಾರು 8.5 ಮೀಟರ್ ನಿಂದ 31.5 ಮೀಟರ್ ರವರೆಗೆ ಎತ್ತರದಲ್ಲಿರುತ್ತದೆ.
   ii. ಮುಖ್ಯ ರಸ್ತೆಯಿಂದ ಗುರುತಿಸಿರುವ ಜಮೀನಿನ ರಸ್ತೆಯು ಬಹಳ ಕಿರಿದಾಗಿದ್ದು, ಪರಿವರ್ತಕಗಳ ಮತ್ತು ಇತರೆ ಉಪಕರಣಗಳನ್ನು ಸಾಗಿಸಲು ಕಷ್ಟಸಾಧ್ಯವಾಗಿರುತ್ತದೆ.
   iii. ಗುರುತಿಸಿರುವ ಜಮೀನನ್ನು ಸಮತಟ್ಟು ಮಾಡುವುದು, ರಕ್ಷಣಾತ್ಮಕ ಕಾಮಗಾರಿಗಳಾದ ತಡೆಗೋಡೆ ನಿರ್ಮಿಸುವುದು, ಮಳೆ ನೀರು ಚರಂಡಿ ನಿರ್ಮಿಸುವುದು ಇತ್ಯಾದಿ ಕಾಮಗಾರಿಗಳೊಂದಿಗೆ ಸದರಿ ಜಮೀನನ್ನು ಉಪಕೇಂದ್ರ ನಿರ್ಮಿಸಲು ಸಿದ್ದಗೊಳಿಸಲು ಬಹಳ ವೆಚ್ಚವಾಗುತ್ತದೆ.

6. ಮುಖ್ಯ ಇಂಜಿನಿಯರ್ (ವಿ), (ಯೋ ಮತ್ತು ಸ) ರವರು ಸದರಿ ಜಮೀನಿನ ಖರೀದಿ ಪ್ರಸ್ತಾವನೆಯನ್ನು ಕೈಬಿಡಲು ಹಾಗೂ ಪರ್ಯಾಯ ಜಮೀನು ಗುರುತಿಸಲು ಉಲ್ಲೇಖ (7) ರ ಪತ್ರದಲ್ಲಿ ತಿಳಿಸಿದ್ದರು.

7. ಪರ್ಯಾಯ ಖಾಸಗಿ ಜಮೀನನ್ನು ಗುರುತಿಸಲು ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಬೃಹತ್ ಕಾಮಗಾರಿ ವಿಭಾಗ, ಮಂಗಳೂರು ರವರು ದಿನಾಂಕ 24/03/2021 ರಲ್ಲಿ ಪತ್ರಿಕಾ ಪ್ರಕಟಣೆ ನೀಡಿದ್ದರೂ ಸಹ ಯಾವುದೆ ಸೂಕ್ತ ಪರ್ಯಾಯ ಜಮೀನನ್ನು ಗುರುತಿಸಲಾಗಿಲ್ಲವೆಂದು ತಿಳಿಸಿದ್ದ ಹಿನ್ನೆಲೆಯಲ್ಲಿ, ಸಂಗಬೆಟ್ಟು ಗ್ರಾಮದ ವ್ಯಾಪ್ತಿಯಲ್ಲಿ 110/11ಕೆ.ವಿ ಉಪಕೇಂದ್ರ ನಿರ್ಮಿಸಲು ಸೂಕ್ತವಾದ ಸುಮಾರು 3-00 ಎಕರೆ ಸರ್ಕಾರಿ ಜಮೀನನ್ನು ಹಂಚಿಕೆ ಮಾಡುವಂತೆ ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರಿಂದ ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ರವರಿಗೆ ಉಲ್ಲೇಖ (8) ರ ಪತ್ರದಲ್ಲಿ ಕೋರಲಾಗಿತ್ತು. ಈ ಸಂಬಂಧ, ಬಂಟ್ವಾಳ ತಾಲ್ಲೂಕು, ಸಂಗಬೆಟ್ಟು ಗ್ರಾಮದ ಸರ್ವೆ ಸಂಖ್ಯೆ 227 ರಲ್ಲಿ 4-00 ಎಕರೆ ಸರ್ಕಾರಿ ಜಮೀನನ್ನು ಗುರುತಿಸಿದ್ದರು ಸಹ ಸದರಿ ಪ್ರದೇಶವು ಪರಿಭಾವಿತ ಅರಣ್ಯ ವ್ಯಾಖ್ಯಾನಕ್ಕೆ ಒಳಪಡುತ್ತದೆಯೆಂದು ವಲಯ ಅರಣ್ಯಾಧಿಕಾರಿ, ಬಂಟ್ವಾಳ ವಲಯ ರವರು ತಿಳಿಸಿದ್ದ ಕಾರಣ, ಸೂಕ್ತ ಸರ್ಕಾರಿ ಜಮೀನು ಲಭ್ಯವಿರುವುದಿಲ್ಲ.

8. ದಿನಾಂಕ 18/05/2022 ರಂದು ನಡೆದ ಸಾರ್ವಜನಿಕ ಉದ್ದಿಮೆಗಳ ಸಮಿತಿ ಸಭೆಯಲ್ಲಿ ಬಂಟ್ವಾಳ ತಾಲ್ಲೂಕು, ಸಂಗಬೆಟ್ಟು ಗ್ರಾಮದಲ್ಲಿ ಕೂಡಲೆ ಉಪಕೇಂದ್ರ ಸ್ಥಾಪಿಸುವ ಬಗ್ಗೆ ಚರ್ಚಿಸಲಾಯಿತು ಹಾಗೂ ಸದರಿ ಗ್ರಾಮದ ವ್ಯಾಪ್ತಿಯಲ್ಲಿ ಯಾವುದೆ ಸರ್ಕಾರಿ ಜಮೀನು/ಖಾಸಗಿ ಜಮೀನು ಲಭ್ಯವಿಲ್ಲದ ಕಾರಣ, ಈಗಾಗಲೆ ಗುರುತಿಸಿರುವ ಸರ್ವೆ ಸಂಖ್ಯೆ 274/3 ರಲ್ಲಿನ ಜಾಗದಲ್ಲಿ ಉಪಕೇಂದ್ರ ಸ್ಥಾಪಿಸಲು ಸಾರ್ವಜನಿಕ ಉದ್ದಿಮೆಗಳ ಸಮಿತಿ ಸೂಚಿಸಿತು.

9. ಕಳೆದ 5 ವರ್ಷಗಳಿಂದ ಸಂಗಬೆಟ್ಟು ಗ್ರಾಮದಲ್ಲಿ ಸೂಕ್ತ ಜಮೀನಿನ ಲಭ್ಯತೆ ಇಲ್ಲದ ಕಾರಣ, 110/11ಕೆ.ವಿ ಉಪಕೇಂದ್ರ ಸ್ಥಾಪಿಸುವ ಯೋಜನೆ ನೆನೆಗುದಿಯಲ್ಲಿದ್ದು, ಈ ಹಿಂದೆ ಗುರುತಿಸಲಾದ ಶ್ರೀ. ಪಾಲ್ ಪಿಂಟೋ

ರವರಿಗೆ ಸೇರಿದ ಸರ್ವೆ ಸಂಖ್ಯೆ 274/2 ರಲ್ಲಿ ಲಭ್ಯವಿರುವ 2.957 ಎಕರೆ ಜಮೀನನ್ನು, ನೆಲಸಮತಟ್ಟು ಮಾಡುವುದು ಹಾಗೂ ಇತರೆ ರಕ್ಷಣಾತ್ಮಕ ಕಾಮಗಾರಿಗಳಿಗೆ ಅಧಿಕ ವೆಚ್ಚ ಉಂಟಾದರೂ ಸಹ, ಖರೀದಿಸುವ ಪ್ರಸ್ತಾವನೆಯನ್ನು ಹಾಗೂ ಭೂ ಭಾಪೆ ವಿನ್ಯಾಸಕ್ಕೆ ಅವಶ್ಯವಿರುವ ಸದರಿ ಜಮೀನಿಗೆ ಹೊಂದಿಕೊಂಡಂತಿರುವ ಸರ್ವೆ ಸಂಖ್ಯೆ 274/3 ರಲ್ಲಿನ 0.68 ಎಕರೆ ಸರ್ಕಾರಿ ಜಮೀನನ್ನು ಉಪಕೇಂದ್ರ ಸ್ಥಾಪಿಸಲು ಹಂಚಿಕೆ ಮಾಡಿಸಿಕೊಳ್ಳುವ ಪ್ರಸ್ತಾವನೆಯನ್ನು ದಿನಾಂಕ 04/08/2022 ರಂದು ನಡೆದ 132 ನೇ ಮಂಡಳಿ ಸಭೆಯ ಮುಂದೆ ಮಂಡಿಸಿ ಅನುಮೋದನೆ ಪಡೆಯಲಾಗಿದೆ.

ಈ ಹಿನ್ನೆಲೆಯಲ್ಲಿ, ಕೆಳಕಂಡಂತೆ ಆದೇಶಿಸಲಾಗಿದೆ. 20 OCT 2022.

**ಆದೇಶ ಸಂಖ್ಯೆ: ಕವಿಪ್ರನಿನಿ/ಎಸ್‌ಎ8/ಬಿ7/2003/14-15/ಬೆಂಗಳೂರು** **ದಿನಾಂಕ** 20 OCT 2022 ರಂದು

ದಿನಾಂಕ 04/08/2022 ರ 132 ನೇ ಕವಿಪ್ರನಿನಿ ಮಂಡಳಿ ನಿರ್ದೇಶಕರ ಸಭೆಯ ನಡವಳಿಯನ್ವಯ ದಕ್ಷಿಣ ಕನ್ನಡ ಜಿಲ್ಲೆ, ಬಂಟ್ವಾಳ ತಾಲ್ಲೂಕು, ಸಂಗಬೆಟ್ಟು ಗ್ರಾಮದಲ್ಲಿ 110/11ಕೆ.ವಿ ಉಪಕೇಂದ್ರ ಸ್ಥಾಪಿಸುವ ಯೋಜನೆಯ ಸಲುವಾಗಿ ಸೂಕ್ತ ಸರ್ಕಾರಿ ಜಮೀನು ಲಭ್ಯವಿಲ್ಲದ ಹಿನ್ನೆಲೆಯಲ್ಲಿ, ಈಗಾಗಲೆ ಸದರಿ ಯೋಜನೆಗೆ ಗುರುತಿಸಲಾಗಿರುವ ಜಮೀನುಗಳನ್ನು ನಿಗಮ ಸ್ವಾಮ್ಯಕ್ಕೆ ಪಡೆಯಲು ಈ ಕೆಳಕಂಡಂತೆ ಕ್ರಮಕೈಗೊಳ್ಳುವುದು.

- ಈ ಹಿಂದೆ ಗುರುತಿಸಲಾದ ಶ್ರೀ. ಪಾಲ್ ಪಿಂಟೋ ರವರಿಗೆ ಸೇರಿದ ಸರ್ವೆ ಸಂಖ್ಯೆ 274/2 ರಲ್ಲಿನ 2.957 ಎಕರೆ ಜಮೀನನ್ನು ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ರವರು 2014-15 ನೇ ಸಾಲಿನಲ್ಲಿ ನಿಗದಿಪಡಿಸಿದ ದರ ಪ್ರತಿ ಸೆಂಟ್ಸ್ ಗೆ ರೂ.55,000/- ಗಳಂತೆ ಒಟ್ಟು ಮೊತ್ತ ರೂ.1,62,63,500/- (ನೋಂದಣಿ ಮತ್ತು ಮುದ್ರಾಂಕ ಶುಲ್ಕ ಹೊರತುಪಡಿಸಿ) ಗಳಂತೆ ಖರೀದಿಸುವುದು.

- ಸದರಿ ಜಮೀನಿಗೆ ಹೊಂದಿಕೊಂಡಂತೆ ಸರ್ವೆ ಸಂಖ್ಯೆ 274/3 ರಲ್ಲಿ 0.68 ಎಕರೆ ಸರ್ಕಾರಿ ಜಮೀನನ್ನು ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ರವರು ನಿಗದಿಪಡಿಸುವ ದರದಂತೆ ಭೂ ಮಂಜೂರಾತಿ ನಿಯಮಗಳನ್ವಯ ಮಂಜೂರಾತಿ ಮಾಡಿಸಿಕೊಳ್ಳುವುದು.

- ಸದರಿ ಜಮೀನುಗಳಲ್ಲಿ ಉಪಕೇಂದ್ರ ನಿರ್ಮಿಸುವ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಅಗತ್ಯವಿರುವ ನೆಲಸಮತಟ್ಟು ಮಾಡುವ, ತಡೆಗೋಡೆ ನಿರ್ಮಿಸುವ ಹಾಗೂ ಇತರೆ ರಕ್ಷಣಾತ್ಮಕ ಕಾಮಗಾರಿಗಳನ್ನು ನಿರ್ವಹಿಸಲು ಅಗತ್ಯವಿರುವ ವೆಚ್ಚವನ್ನು ಯೋಜನಾ ಅಂದಾಜು ಪಟ್ಟಿಯಲ್ಲಿ (ಡಿಪಿಆರ್) ಅಳವಡಿಸಿಕೊಳ್ಳುವುದು.

ಆದೇಶದ ಮೇರೆಗೆ

ನಿರ್ದೇಶಕರು (ಆ ಮತ್ತು ಮಾ.ಸಂ)
ಕವಿಪ್ರನಿನಿ, ಬೆಂಗಳೂರು.

**ಪ್ರತಿಗಳು:-**

1. ಮುಖ್ಯ ಇಂಜಿನಿಯರ್ (ವಿ), (ಯೋ ಮತ್ತು ಸ), ಕಾವೇರಿ ಭವನ, ಕವಿಪ್ರನಿನಿ, ಬೆಂಗಳೂರು.
2. ಮುಖ್ಯ ಇಂಜಿನಿಯರ್ (ವಿ), (ಟಿ ಮತ್ತು ಪಿ), ಕಾವೇರಿ ಭವನ, ಕವಿಪ್ರನಿನಿ, ಬೆಂಗಳೂರು.
3. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಕವಿಪ್ರನಿನಿ, ಹಾಸನ.
4. ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ) /(ಆಂತರಿಕ ಪರಿಶೋಧನೆ), ಕವಿಪ್ರನಿನಿ.
5. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
6. ಅಧೀಕ್ಷಕ ಇಂಜಿನಿಯರ್ (ವಿ), (ಪಿಎಂ), ಕಾವೇರಿ ಭವನ, ಕವಿಪ್ರನಿನಿ, ಬೆಂಗಳೂರು
7. ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ಕಾ ಮತ್ತು ನಿ) ವೃತ್ತ, ಕವಿಪ್ರನಿನಿ, ಮಂಗಳೂರು.
8. ಅಧೀಕ್ಷಕ ಇಂಜಿನಿಯರ್ (ಸಿವಿಲ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
9. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ) - ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು
10. ಲೆಕ್ಕ ನಿಯಂತ್ರಣಾಧಿಕಾರಿ, ಪ್ರಸರಣ ವಲಯ, ಕವಿಪ್ರನಿನಿ, ಹಾಸನ.
11. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಬೃಹತ್ ಕಾಮಗಾರಿ ವಿಭಾಗ, ಕವಿಪ್ರನಿನಿ, ಮಂಗಳೂರು.

12. ಕಾರ್ಯನಿರ್ವಾಹಕ ಇಂಜಿನಿಯರ್ (ಸಿವಿಲ್), ಪ್ರಸರಣ ವಲಯ, ಕವಿಪ್ರನಿನಿ. ಹಾಸನ.
13. ಉಪಲೆಕ್ಕ ನಿಯಂತ್ರಣಾಧಿಕಾರಿ (ಆಂತರಿಕ ಪರಿಶೋಧನೆ). ಪ್ರಸರಣ ವಲಯ, ಕವಿಪ್ರನಿನಿ. ಹಾಸನ.
14. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಆ ಮತ್ತು ಮಾ. ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
15. ಲೆಕ್ಕಾಧಿಕಾರಿ (ಕೋಡೀಫಿಕೇಷನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.